ಓ.ಎಸ್. ನಂಃ **17/2022**
<u>ಪಿ.ಡಬ್ಲ್ಯೂಃ **3**</u>

ದಿನಾಂಕಃ 22-01-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಗೆ ತೆಲುಗು ಭಾಷೆ ಬರುತ್ತದೆ ಕನ್ನಡ ಭಾಷೆ ಸ್ವಲ್ಪ-ಸ್ವಲ್ಪ ಬರುತ್ತದೆ ಎಂದು ಹೇಳಿದ ಮೇರೆಗೆ ಶ್ರೀ ಎಂ.ವಿ ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಿಸಲಾಯಿತು ಹಾಗೂ ಅವರಿಗೆ ಪ್ರಮಾಣ ವಚನ ಭೊದಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಂ.ಬಿ.ಪಿ ವಕೀಲರಿಂದಃ</u>

ಈ ದಾವೆಯನ್ನು ಶ್ರೀನಿವಾಸ ರವರು ಹೊಲ ಬೇಕು ಎಂದು ವೆಂಕಟಮ್ಮ ರವರ ವಿರುದ್ಧ ದಾಖಲಿಸಿದ್ದಾರೆ. ವಾದಿ ಈ ದಾವೆಯನ್ನು ಸರ್ವೆ ನಂ.144 ರ 34 ಗುಂಟೆ, ಸರ್ವೆ ನಂ.532 ರ 02 ಎಕರೆ ಹಾಗೂ ಸರ್ವೆನಂ.533 ರ 02 ಎಕರೆ 29 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ದಾಖಲಿಸಿದ್ದಾರೆ. ನನಗೆ ಸದರಿ ಜಮೀನುಗಳ ಚೆಕ್ ಬಂದಿ ಗೊತ್ತಿದೆ.

2. ಸರ್ವೆ ನಂ.533/ಅ ರಲ್ಲಿನ 02 ಎಕರೆ 29 ಗುಂಟೆ ಜಮೀನಿನ ಪೂರ್ವಕ್ಕೆ ಹಣಮಂತ ರವರ ಜಮೀನು, ಪಶ್ಚಿಮಕ್ಕೆ ಗುರುಮಠಕಲ್ ಪಟ್ಟಣದವರ ಜಮೀನು ಇದೆ ಆದರೆ ನನಗೆ ಅವರ ಹೆಸರು ಗೊತ್ತಿಲ್ಲ, ಉತ್ತರಕ್ಕೆ ದಾರಿ ಹಾಗೂ ದಕ್ಷಿಣಕ್ಕೆ ಬುಗ್ಗಪ್ಪ ರವರ ಜಮೀನು ಇದೆ. ಸದರಿ ಜಮೀನು 2006-07 ರಲ್ಲಿ ಬುಡ್ಡಪ್ಪ ರವರ ಹೆಸರಿನಲ್ಲಿ ಇತ್ತು. ಅವರ ಹೆಸರಿಗೆ ಯಾವಾಗ ಖಾತಾ ವರ್ಗಾವಣೆ ಆಗಿತ್ತು ಎಂಬುದು ನನಗೆ ಗೊತ್ತಿಲ್ಲ. ನಾನು ಸದರಿ ಬುಡ್ಡಪ್ಪ ರವರನ್ನು ನೋಡಿದ್ದೇನೆ. ಸದರಿಯವರು ಈಗ 14 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ಆತ ತೀರಿಕೊಂಡ ನಂತರ ಜಮೀನು ಲಕ್ಷ್ಮಮ್ಮ ರವರ ಹೆಸರಿಗೆ ಖಾತಾ ವರ್ಗಾವಣೆ ಆಗಿತ್ತು. ಬುಡ್ಡಪ್ಪ ತೀರಿಕೊಂಡ ನಂತರ ಲಕ್ಷ್ಮಮ್ಮ ರವರು ಸದರಿ ಜಮೀನಿನ ಮಾಲಿಕ ಹಾಗೂ ಕಬ್ಜೆದಾರರಾಗಿದ್ದರು ಎಂದರೆ ಸರಿ. ಲಕ್ಷ್ಮಮ್ಮ ರವರು ಸದರಿ ಜಮೀನಿಗೆ ಸಂಬಂಧಿಸಿದಂತೆ 7 ನೇ ಪ್ರತಿವಾದಿಯ ಹೆಸರಿಗೆ ನೊಂದಾಯಿತ ದಾಖಲೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಆ ಪ್ರಕಾರ ಪದ್ಮಮ್ಮ ರವರ ಹೆಸರಿಗೆ ಖಾತೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ. ಸದರಿ 02 ಎಕರೆ 29 ಗುಂಟೆ ಜಮೀನಿನ ಪೂರ್ವಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ. ಉತ್ತರಕ್ಕೆ ಭೀಮಣ್ಣ ತಂದೆ ಆಶಪ್ಪ ರವರ ಜಮೀನು ಇದೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಮಲ್ಲಪ್ಪ ರವರ ಜಮೀನು ಇದೆ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ಸರ್ವೆ ನಂ.534 ರ ಜಮೀನು ಇದೆ ಎಂದರೆ ಸಾಕ್ಷಿಯು ಬುಗ್ಗಪ್ಪ ರವರ ಜಮೀನು ಇದೆ ಎಂದು

ನುಡಿಯುತ್ತಾರೆ. ಬುಗ್ಗಪ್ಪ ರವರ ಸದರಿ ಜಮೀನಿನ ಸರ್ವೆ ನಂ.534 ಆಗಿರುತ್ತದೆ. ಈಗ ಸದರಿ ಜಮೀನನ್ನು ಸದರಿ 02 ಎಕರೆ 29 ಗುಂಟೆ ಜಮೀನನ್ನು 7 ನೇ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡದೇ ಸುಮ್ಮನೆ ನಿಂತಿರುತ್ತಾರೆ.

3. ದಾವಾ ಸರ್ವೆ ನಂ.532/2 ರ ಜಮೀನು ಸಹ ಲಕ್ಷ್ಮಮ್ಮ ರವರ ಹೆಸರಿಗೆ ಖಾತಾ ವರ್ಗಾವಣೆ ಆಗಿತ್ತು ಎಂದರೆ ಸರಿ. ಸದರಿ ಜಮೀನು ಸಹ ಮೊದಲು ಬುಡ್ಡಪ್ಪ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ನಂತರ ಲಕ್ಷ್ಮಮ್ಮ ರವರು ಜಮೀನಿಗೆ ಸಬಂಧಿಸಿದಂತೆ 6 ನೇ ಪ್ರತಿವಾದಿಯ ಹೆಸರಿಗೆ ನೊಂದಾಯಿತ ದಾಖಲೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ಜಮೀನಿನ ಈ ವರ್ಷದ ಪಹಣಿಯನ್ನು ನೋಡಿಲ್ಲ. ಸದರಿ ಜಮೀನು ಈಗ 6 ನೇ ಪ್ರತಿವಾದಿಯ ಹಸರಿನಲ್ಲಿ ಇದ ಎಂದರೆ ಸಾಕ್ಷಿಯು ನಾನು ಈಗ ಪಹಣಿ ನೋಡಿಲ್ಲ ಎಂದು ನುಡಿಯುತ್ತಾರೆ. ಸದರಿ 02 ಎಕರೆ ಜಮೀನಿನ ಪೂರ್ವಕ್ಕೆ ಭೀಮಣ್ಣ ತಂದೆ ಆಶಪ್ಪ ರವರ ಜಮೀನು ಇದೆ ಎಂದರೆ ಸರಿ. ಪಶ್ಚಿಮಕ್ಕೆ ಹಣಮಂತ ತಂದೆ ಭೀಮಪ್ಪ ರವರ ಜಮೀನು ಇದೆ ಎಂದರೆ ಸರಿ. ಉತ್ತರಕ್ಕೆ ಸರ್ವೆ ನಂ.525 ರ ಜಮೀನು ಇದೆ ಎಂದರೆ ಸರಿ. ದಕ್ಷಿಣಕ್ಕೆ ಸರ್ವೆ ನಂ.535 ರ ಜಮೀನು ಇದೆ ಎಂದರೆ ಸರಿ.

4. ನಾನು ಪೋಟೋ ನೋಡಿ ಲಕ್ಷ್ಮಮ್ಮ ರವರನ್ನು ಗುರುತಿಸಬಲ್ಲೆನು. ಸಾಕ್ಷಿಗೆ ಈಗ ದಿನಾಂಕ 15.12.2021 ರ ನೊಂದಾಯಿತ ಹಕ್ಕು ಬಿಡುಗಡೆ ಪತ್ರವನ್ನು ತೋರಿಸಲಾಗಿ 4 ನೇ ಪುಟದಲ್ಲಿನ ಲಕ್ಷ್ಮಮ್ಮ ರವರ ಪೋಟೋವನ್ನು ಸಾಕ್ಷಿ ಈಗ ನೋಡಿ ಗುರುತಿಸಿದ್ದು, ದಾಖಲೆಯನ್ನು ನಿಡಿ-1 ಹಾಗೂ ಸಾಕ್ಷಿ ಗುರುತಿಸಿದ ಪೋಟೋವನ್ನು ನಿಡಿ-1 ಎ ಎಂದು ಗುರುತಿಸಲಾಯಿತು. ಲಕ್ಷ್ಮಮ್ಮ ರವರು ಹೆಬ್ಬೆಟ್ಟಿನ ಗುರುತು ಹಾಕುತ್ತಿದ್ದರು ಎಂದರೆ ಸರಿ. ಸಾಕ್ಷಿಗೆ ಈಗ ದಿನಾಂಕ 15.12.2021 ರ ಇನ್ನೊಂದು ನೊಂದಾಯಿತ ಹಕ್ಕು ಬಿಡುಗಡೆ ಪತ್ರವನ್ನು ತೋರಿಸಲಾಗಿ 4 ನೇ ಪುಟದಲ್ಲಿನ ಲಕ್ಷ್ಮಮ್ಮ ರವರ ಪೋಟೋವನ್ನು ಸಾಕ್ಷಿ ಈಗ ನೋಡಿ ಗುರುತಿಸಿದ್ದು, ದಾಖಲೆಯನ್ನು ನಿಡಿ-2 ಹಾಗೂ ಸಾಕ್ಷಿ ಗುರುತಿಸಿದ ಪೋಟೋವನ್ನು ನಿಡಿ-2 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ದಿನಾಂಕ 15.12.2021 ರ ಮತ್ತೊಂದು ನೊಂದಾಯಿತ ಹಕ್ಕು ಬಿಡುಗಡೆ ಪತ್ರವನ್ನು ತೋರಿಸಲಾಗಿ 4 ನೇ ಪುಟದಲ್ಲಿನ ಲಕ್ಷ್ಮಮ್ಮ ರವರ ಪೋಟೋವನ್ನು ಸಾಕ್ಷಿ ಈಗ ನೋಡಿ ಗುರುತಿಸಿದ್ದು, ದಾಖಲೆಯನ್ನು ನಿಡಿ-3 ಹಾಗೂ ಸಾಕ್ಷಿ ಗುರುತಿಸಿದ ಪೋಟೋವನ್ನು ನಿಡಿ-3 ಎ ಎಂದು ಗುರುತಿಸಲಾಯಿತು. ಲಕ್ಷ್ಮಮ್ಮ ರವರು ದಾವಾ ಜಮೀನುಗಳಿಗೆ ಸಂಬಂಧಿಸಿದಂತೆ 6 ರಿಂದ

8 ನೇ ಪ್ರತಿವಾದಿಗಳಿಗೆ ಮಾಡಿಕೊಟ್ಟಿರುವ ದಾಖಲೆಗಳಲ್ಲಿ ತಮ್ಮ ಹೆಬ್ಬೆಟ್ಟಿನ ಗುರುತು ಹಾಕಿದ್ದಾರೆ ಎಂದರೆ ಸಾಕ್ಷಿಯು ಹೆಬ್ಬೆಟ್ಟಿನ ಗುರುತು ಹಾಕಿದ್ದಾರೆ ಆದರೆ ದಾಖಲೆ ಮಾಡಿಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನಮ್ಮ ಗ್ರಾಮದಲ್ಲಿ ಲಕ್ಷ್ಮಮ್ಮ ಗಂಡ ಬುಡ್ಡಪ್ಪ ತಲಾರಿ ಎಂಬ ಇನ್ನೊಬ್ಬ ವ್ಯಕ್ತಿ ಇರುವುದಿಲ್ಲ. ಲಕ್ಷ್ಮಮ್ಮ ರವರು ಸ್ವತಃ ನೊಂದಣಾಧಿಕಾರಿಗಳ ಕಚೇರಿಗೆ ಹೋಗಿ ಪೋಟೋ ತೆಗೆಸಿಕೊಂಡು ಹೆಬ್ಬೆಟ್ಟಿನ ಗುರುತು ಹಾಕಿ 6 ರಿಂದ 8 ನೇ ಪ್ರತಿವಾದಿಯರಿಗೆ ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

5. ದಾವಾ ಸರ್ವೆ ನಂ.144 ರ 34 ಗುಂಟೆ ಜಮೀನಿನ ಪೂರ್ವಕ್ಕೆ ಉಷಪ್ಪ ತಂದೆ ಮೊಗಲಪ್ಪ ರವರ ಜಮೀನು ಇದೆ ಎಂದರೆ ಸರಿ. ಪಶ್ಚಿಮಕ್ಕೆ ಸರ್ವೆ ನಂ.89 ರ ಜಮೀನು ಇದೆ ಎಂದರೆ ಸರಿ. ಉತ್ತರಕ್ಕೆ ಸರ್ವೆ ನಂ.90 ರ ಜಮೀನು ಇದೆ ಎಂದರೆ ಸರಿ. ದಕ್ಷಿಣಕ್ಕೆ ನರಸಪ್ಪ ತಂದೆ ಮಲ್ಲಪ್ಪ ರವರ ಜಮೀನು ಇದೆ ಎಂದರೆ ಸರಿ. 6 ರಿಂದ 8 ನೇ ಪ್ರತಿವಾದಿಯರು ದಾವಾ ಜಮೀನುಗಳ ಮಾಲಿಕರು ಹಾಗೂ ಸ್ವಾಧೀನದಾರರಾಗಿರುತ್ತಾರೆ ಎಂದರೆ ಸರಿಯಲ್ಲ. 2021 ರಿಂದ ಪಹಣಿ ಪತ್ರಿಕೆಗಳಲ್ಲಿ 6 ರಿಂದ 8 ನೇ ಪ್ರತಿವಾದಿಯರ ಹೆಸರು ನಮೂದು ಇದ್ದಾವೆ ಎಂದರೆ ಸಾಕ್ಷಿ ಸರಿಯಲ್ಲ, ಮುಂದುವರೆದು ಲಕ್ಷ್ಮಮ್ಮ ರವರ 2020 ರಲ್ಲಿಯೇ ಮರಣಹೊಂದಿದ್ದಾರೆ ಎಂದು ನುಡಿಯುತ್ತಾರೆ. ಲಕ್ಷ್ಮಮ್ಮ ರವರನ್ನು 6 ರಿಂದ 8 ನೇ ಪ್ರತಿವಾದಿಯರು ಆರೈಕೆ ಮಾಡಿದ್ದರು ಎಂದರೆ ಸರಿಯಲ್ಲ. ಲಕ್ಷ್ಮಮ್ಮ ರವರಿಗೆ ಕೊನೆ ಕಾಲದಲ್ಲಿ ಹುಷಾರಿರಲಿಲ್ಲ ಎಂದರೆ ಸರಿ. ಆಗ 6 ರಿಂದ 8 ನೇ ಪ್ರತಿವಾದಿಯರು ಲಕ್ಷ್ಮಮ್ಮ ರವರನ್ನು ನೋಡಿಕೊಂಡು ಅವರಿಗೆ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ.

6. ವಾದಿ ಚಿಕ್ಕ ವಯಸ್ಸಿನಿಂದ ಹೈದ್ರಬಾದಿನಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆಗಾಗ ಹೋಗಿ ಬರುತ್ತಾರೆ ಎಂದು ನುಡಿಯುತ್ತಾರೆ. ವಾದಿ ದೌಲತಬಾದಿನ ನೇತಾಜಿ ನಗರದಲ್ಲಿ ಖಾಯಂ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾ ಜಮೀನುಗಳು ಪ್ರಸ್ತುತ ಪಹಣಿಗಳನ್ನು ನೋಡಿಲ್ಲ. ಈಗ ಜಮೀನುಗಳು ಯಾರ ಹೆಸರಿನಲ್ಲಿ ಇದೆ ಎಂಬುದು ನನಗೆ ಗೊತ್ತಿಲ್ಲ.

7. ನಿಮ್ಮ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನಿಮಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಮಗೆ ಕನ್ನಡ ಓದಲು-ಬರೆಯಲು ಬರುವುದಿಲ್ಲ ಎಂದರೆ ಸಾಕ್ಷಿ ಸ್ವಲ್ಪ-ಸ್ವಲ್ಪ ಬರುತ್ತದೆ ಎಂದು ನುಡಿಯುತ್ತಾರೆ.

ನನ್ನನ್ನು ವಾದಿ ಸಾಕ್ಷ ನುಡಿಯಲು ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ. ಯಾವುದೇ ವೈಯಕ್ತಿಕ ಮಾಹಿತಿ ಇಲ್ಲದೇ ವಾದಿ ಹೇಳಿಕೊಟ್ಟಂತೆ ನಾನು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಜಮೀನುಗಳ ಅಕ್ಕ-ಪಕ್ಕದಲ್ಲಿ ನನ್ನ ಜಮೀನು ಇಲ್ಲ ಎಂದರೆ ಸರಿಯಲ್ಲ. ಅಕ್ಕ-ಪಕ್ಕದಲ್ಲಿ ನಿಮ್ಮ ಜಮೀನು ಇರವುದಾಗಿ ನಿಮ್ಮ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯ ಹಾಗೂ ದಾವಾ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ನಾನು ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ